

ಕೌಟುಂಬಿಕ ಅಗತ್ಯಗಳನ್ನು ಆದ್ಯತೆಯನ್ನಾಗಿ ಮಾಡಿಕೊಳ್ಳದೇ ಸ್ವಾವಲಂಬನೆ ಮತ್ತು ಸ್ವಾಭಿಮಾನದ ಹಾದಿಯನ್ನು ಆಯ್ಕೆ ಮಾಡಿಕೊಂಡು ಅನೇಕ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮನಾದ ಸಾಧನೆಯನ್ನು ಮಾಡುತ್ತಿದ್ದಾಳೆ. ಅಂತಹ ನಿರ್ಧಾರಗಳನ್ನು ಮಾಡುವ ಧೈರ್ಯ ನಿಧಾನವಾಗಿ ಮೂಡುತ್ತಿದೆ. ಅಂದಮಾತ್ರಕ್ಕೆ, ಅತ್ತ ವೃತ್ತಿ ಕ್ಷೇತ್ರದಲ್ಲಿ ಆಕೆಗೆ ಎಲ್ಲವೂ ಸುಲಭವಾಗಿ ಒದಗಿ ಬರುತ್ತಿದೆ ಎಂದು ಹೇಳುವಂತಿಲ್ಲ. ಈ ಸಂದರ್ಭದಲ್ಲಿ, ಜಗತ್ತಿನಲ್ಲಿ ಇತ್ತೀಚೆಗೆ ರೂಪುಗೊಂಡ 'ಮದರ್‌ಹುಡ್ ಪೆನಾಲ್ಟಿ' ಎಂಬ ಪರಿಕಲ್ಪನೆಯನ್ನು ಗಮನಿಸಬಹುದು.

ತಾಯ್ತನಕ್ಕೆ ತೆರಬೇಕಾದ ಬೆಲೆಯನ್ನು 'ಮದರ್‌ಹುಡ್ ಪೆನಾಲ್ಟಿ' ಪರಿಕಲ್ಪನೆ ಕಟ್ಟಿಕೊಡುತ್ತದೆ. ಕನ್ನಡದಲ್ಲಿ ಈ ಪರಿಕಲ್ಪನೆಯನ್ನು 'ತಾಯ್ತನದ ಶುಲ್ಕ' ಎನ್ನಬಹುದೇನೊ. ವೃತ್ತಿ ಕ್ಷೇತ್ರದಲ್ಲಿರುವ ಮಹಿಳೆಯು ಅಮ್ಮನ ಪಟ್ಟವನ್ನು ಏರಬೇಕಾದರೆ ತನ್ನ ಶ್ರಮ, ದುಡಿಮೆ ಮತ್ತು ಅನುಭವದಿಂದ ದೊರೆಯಬಹುದಾದ ಬಡ್ತಿಯನ್ನು, ವೇತನ ಹೆಚ್ಚಳವನ್ನು ತ್ಯಾಗ ಮಾಡಿ ಬದಿಗೆ ಸರಿದು ನಿಲ್ಲಬೇಕಾಗುತ್ತದೆ. ಇದು ವೃತ್ತಿಪರ ಮಹಿಳೆ ತಾಯ್ತನಕ್ಕಾಗಿ ತೆರಬೇಕಾದ 'ಬೆಲೆ'.

ಇಲ್ಲೊಂದು ವಿಪರ್ಯಾಸವನ್ನು ಗುರುತಿಸಬೇಕು. ಉದ್ಯಮ ಕ್ಷೇತ್ರವು ಸದಾ ಲಾಭ ನಷ್ಟಗಳ ಲೆಕ್ಕಾಚಾರವನ್ನೇ ಪ್ರಧಾನವಾಗಿ ನೋಡುತ್ತದೆ. ಆದ್ದರಿಂದ ಕಂಪೆನಿಯೊಂದರ ಸಿಬ್ಬಂದಿಯ ಪಟ್ಟಿಯಲ್ಲಿ ಮಹಿಳೆಯರ ಸಂಖ್ಯೆಯ ಅನುಪಾತ ಎಷ್ಟಿರಬೇಕು ಎಂಬುದನ್ನೂ



**ಹೆಂಡತಿಯಾದವಳು ಹೆಣ್ಣುಮಕ್ಕಳನ್ನೇ ಹೆತ್ತರೆ ಸಿಟ್ಟು ಮಾಡಿಕೊಳ್ಳುವ ಗಂಡ, ಬೇರೊಂದು ಹುಡುಗಿಯನ್ನು ಮದುವೆಯಾಗುವುದು ವಾಡಿಕೆಯಾಗಿತ್ತು. ಹಾಗೆ ಹೆಣ್ಣು ಹೆತ್ತ ತಾಯಿಯೂ ದೇವರೇ ಅಲ್ಲವೇ? ಆಕೆಯ ಅನಿಸಿಕೆ ಅಭಿಪ್ರಾಯಗಳನ್ನು ಹೇಳಲು ಅವಕಾಶವೆಲ್ಲಿತ್ತು?**